ಇಂದು ದಿಃ **22-09-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಐ.ಕೆ. ವಕೀಲರಿಂದ ಪ್ರತಿವಾದಿಯ ಪರಃ**

ನಾನು ವಾದಿಯ ಸಂಬಂಧಿ ಇದ್ದು, ಆತ ನನಗೆ ಸಹೋದರ ಸಂಬಂಧಿ ಆಗಬೇಕು. ದಿನಾಂಕಃ24-05-1982 ರ ಹಕ್ಕು ಬಿಡುಗಡೆ ಪತ್ರಕ್ಕೆ ನಾನು ಸಾಕ್ಷಿದಾರ ಇರುವುದಿಲ್ಲ. ಈ ಹಕ್ಕು ಬಿಡುಗಡೆ ಪತ್ರವನ್ನು ನಾನು ನೋಡಿಲ್ಲ. ಸದರಿ ಹಕ್ಕು ಬಿಡುಗಡೆ ಪತ್ರದ ಪ್ರಕಾರ ದಾವಾ ಆಸ್ತಿಗಳನ್ನು ಪ್ರತಿವಾದಿ ಮತ್ತು ಆಕೆಯ ಮಗನಿಗೆ ಬಿಟ್ಟುಕೊಟ್ಟ ಬಗ್ಗೆ ಮತ್ತು ಸ್ವಾಧೀನವನ್ನು ಸಹ ಅಂದೇ ಕೊಟ್ಟ ಬಗ್ಗೆ ಆ ಪತ್ರದಲ್ಲಿ ಇದೆ ಎಂದರೆ ಗೊತ್ತಿಲ್ಲ. ಆ ದಾಖಲೆ ನೊಂದು ಆಗಿದೆ ಎಂದರೆ ಗೊತ್ತಿಲ್ಲ. 18 ಗುಂಟೆ ಜಮೀನಿನ ಸರ್ವೆ ನಂಬರ್ 257 ಇರುತ್ತದೆ. 3 ಎಕರೆಯದು 7 ಅಥವಾ 8 ನೇ ಸರ್ವೆ ನಂಬರ್ ನಲ್ಲಿ ಇರಬಹುದು. ಈ ಎರಡೂ ಜಮೀನುಗಳು ಮಾರಾಟ ಆದ ಬಗ್ಗೆ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ತಿಳಿಸಿದ್ದೇನೆ ಎಂದರೆ ಸರಿ. ಪ್ರತಿವಾದಿಯ ತಂದೆ ಈ ಎರಡೂ ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ. ಪ್ರತಿವಾದಿಯ ತಂದೆಯ ಹೆಸರು ಈರನಗೌಡ ಎಂದು ಇರುತ್ತದೆ. ಯಾವ ತಾರೀಖಿನಂದು ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ. 18 ಗುಂಟೆ ಜಮೀನನ್ನು ಎಂ.ಜಿ ರಾಮನಗೌಡ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಮತ್ತು 3 ಎಕರೆ ಜಮೀನನ್ನು ಎಂ.ಜಿ ಸಿದ್ದನಗೌಡ ಎನ್ನುವವರಿಗೆ ಮಾರಾಟ ಮಾಡಿದ್ದಾರೆ. ಎಷ್ಟು ಹಣಕ್ಕೆ ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ. ಈ ಎರಡೂ ಜಮೀನಗಳಿಗೆ ಸಂಬಂಧಿಸಿದ ಕ್ರಯಪತ್ರಗಳನ್ನು ನಾನು ನೋಡಿಲ್ಲ. 18 ಗುಂಟೆ ಮತ್ತು 3 ಎಕರೆ ಜಮೀನು ಈರನಗೌಡ ಇವರ ಹೆಸರಿಗೆ ಇದ್ದ ಬಗ್ಗೆ ನಾನು ದಾಖಲೆ ನೋಡಿಲ್ಲ. ಈರನಗೌಡ ಈತ ಮಾರಾಟ ಮಾಡಿದ್ದಾನೆ ಎಂದು ನಾನು ದಾಖಲೆಗಳನ್ನು ನೋಡದೇ ಮೌಖಿಕವಾಗಿ ಹೇಳುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಊರಿನಲ್ಲಿ ನಾವು ಇರುವ ಕಾರಣ ಗೊತ್ತು ಎಂದು ಹೇಳುತ್ತಾರೆ. ಸಾಮಾನ್ಯವಾಗಿ

ಒಬ್ಬರು ಆಸ್ತಿ ಮಾರಿದ್ದಾರೆ ಎಂದರೆ, ಅವರ ಹೆಸರಿಗೆ ಇರುವ ಪಹಣಿ ಪತ್ರಿಕೆ ಮತ್ತು ಕ್ರಯಪತ್ರ ನೋಡಿ ಯಾರು ಮಾರಿದ್ದಾರೆ ಎಂದು ಹೇಳ ಬಹುದು ಎಂದರೆ ಸಾಕ್ಷಿ ನಾನು ದಾಖಲೆ ನೋಡಿಲ್ಲ, ಆದರೆ ಊರಿನಲ್ಲಿ ಇರುವ ಕಾರಣ ಗೊತ್ತು ಎಂದು ಹೇಳುತ್ತಾರೆ. ಈರನಗೌಡ ಈ ಆಸ್ತಿಗಳನ್ನು ಮಾರಾಟ ಮಾಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಆಸ್ತಿಗಳಿಗೂ ಈರನಗೌಡ ಈತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇದೆ. ನನಗೆ ಐಟಂ ನಂಬರ್ 5 ಮನೆ ಆಸ್ತಿಯ ಬಗ್ಗೆ ಮಾಹಿತಿ ಇದೆ. ಈ ಆಸ್ತಿ ಪಂಚಾಯಿತಿ ದಾಖಲೆಯಲ್ಲಿ ವಾದಿಯ ಹೆಸರಿಗೆ ಇದೆ. ವಾದಿ ದಿನಾಂಕಃ02-12-2012 ರಂದು ಈ ಆಸ್ತಿಯನ್ನು ಎನ್.ಜಿ ಶಂಕರಗೌಡ ಎನ್ನುವವರಿಗೆ ನೊಂದು ಆಗದೇ ಇರುವ ಕ್ರಯಪತ್ರದ ಅಡಿ ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ಈ ಎನ್.ಜಿ ಶಂಕರಗೌಡ ನನಗೆ ನನ್ನ ಹೆಂಡತಿಯ ಕಡೆಯಿಂದ ಸಂಬಂಧಿಕ. ನಮ್ಮೂರಿನಲ್ಲಿ ಎನ್.ಜಿ ಬಸವನಗೌಡ ಎನ್ನುವವರು ನೀವು ಒಬ್ಬರೇ ಇದ್ದೀರಾ ಎಂದರೆ ಸಾಕ್ಷಿ ತಂದೆಯ ಹೆಸರು ಬೇರೆ ಬೇರೆಯವರು ಇರುವವರು ಇದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ನೊಂದು ಆಗದೇ ಇರುವ ಕ್ರಯಪತ್ರ ತೋರಿಸಿ ಅದರ ಮೇಲೀರುವ ಮೊದಲನೇ ಸಾಕ್ಷಿದಾರರ ಸಹಿ ನನ್ನದು ಎಂದರೆ ಸರಿ. ಸದರಿ ಜೆರಾಕ್ಸ್ ಪ್ರತಿಯನ್ನು ನಿ.ಡಿ-1 ಎಂದು ಗುರುತಿಸಲಾಯಿತು.

ಪ್ರತಿವಾದಿಯ ಹೆಸರಿಗೆ ಇರುವ ಈ ಆಸ್ತಿಯನ್ನು ಎತ್ತಿಹಾಕುವ ಉದ್ದೇಶದಿಂದ, ನಾನು, ವಾದಿ ಮತ್ತು ಸದರಿ ಶಂಕರಗೌಡ ಸೇರಿ, ಈ ದಾಖಲೆಯನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ವಾದಿಯ ಹಿಸ್ಸೆಗೆ ಬಂದ ಆಸ್ತಿಯನ್ನು ಮಾರಿದ್ದಾನೆ ಎಂದು ಹೇಳುತ್ತಾರೆ. ವಾದಿ ನನ್ನ ಪ್ರಭಾವದಲ್ಲಿ ಇರುವ ಕಾರಣ, ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಆತನ ಮುಖಾಂತರ ಈ ದಾವೆ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಹಕ್ಕು ಬಿಡುಗಡೆ ಪತ್ರ ಹೆಸರಿಗೆ ಮಾತ್ರ ಇದೆ ಮತ್ತು ವಾದಿ ಯಾವುದೇ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿಲ್ಲ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈರನಗೌಡ ದಾವಾ ಆಸ್ತಿಗಳಿಗೆ ಯಾವುದೇ ರೀತಿ ಸಂಬಂಧ ಇಲ್ಲದೇ ಇದ್ದರೂ, ವಾದಿಯ ಕಡೆಯಿಂದ ಈ ದಾವೆ ಮಾಡಿಸಲು ಸುಳ್ಳು ಸಂಗತಿಗಳನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನಗೆ ಹಕ್ಕು ಬಿಡುಗಡೆಯ ಪತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ, ವಾದಿ ಯಾವುದೇ ಹಕ್ಕು ಬಿಡುಗಡೆಯ ಪತ್ರ ಮಾಡಿಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೊಂದಾಯಿತು ಹಕ್ಕು ಬಿಡುಗಡೆಯ ಪತ್ರದ ಪ್ರಕಾರ ಪ್ರತಿವಾದಿ ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇದ್ದರೂ, ವಾದಿ ಮಾಡುತ್ತಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ವಾದಿಯೇ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.